'ಹೇಳು' ಎಂದ ರಾಜಕುಮಾರ.

ಅವಳು ಮೂರು ದಿನಗಳಿಂದ ನಡೆಯುತ್ತಿರುವ ತನ್ನ ಕತೆಯನ್ನು ಸಾಂಗವಾಗಿ ಹೇಳಿದಳು. ಅದನ್ನು ಕೇಳಿದ ರಾಜಕುಮಾರನಿಗೆ ಹೀಗೂ ಉಂಟೇ? ಎಂದು ಮಹದಾಶ್ಚರ್ಯವಾಯಿತು. ಕಡೆಗೆ ಅವನಿಗೆ ಏನೋ ಒಂದು ಆಲೋಚನೆ ಬಂದು ಅನುಕಂಪದಿಂದ, 'ನಾನು ನಿನ್ನನ್ನು ನಂಬುತ್ತೇನೆ. ಇನ್ನೂ ಕೆಲವು ದಿನ ಬಾಳೆಗಿಡದಲ್ಲಿಯೇ ಇರು. ಆದರೆ, ಹೂವು ಹಣ್ಣು ಕೀಳಬೇಡ. ನಿನಗೆ ಅರಮನೆಯಿಂದ ಊಟ ತಂದು ಕೊಡುತ್ತೇನೆ. ಇನ್ನು ಕೆಲವೇ ದಿನಗಳಲ್ಲಿ ನಿನ್ನನ್ನು ನಿನ್ನ ತಂದೆ ತಾಯಿಯರೊಂದಿಗೆ ಸೇರಿಸುತ್ತೇನೆ. ನೀನೂ ನನ್ನನ್ನು ನಂಬು' ಎಂದು ಸಾಂತ್ವನ ಹೇಳಿದ. ರಾಜಕುಮಾರಿಗೆ ತುಂಬಾ ಸಂತೋಷವಾಗಿ ಅವನಿಗೆ ತನ್ನ ಕೃತಜ್ಞತೆಯನ್ನು ತಿಳಿಸಿದಳು.

ಮರುದಿನ ರಾತ್ರಿಯೂ ರಾಜಕುಮಾರ ತೋಟದ ಕಾವಲಿಗೆ ಎಂದು ಹೇಳಿ ಬಂದನು. ಅರಮನೆಯ ಊಟವೂ ಬಂದಿತು. ಅವರಿಬ್ಬರೂ ಒಬ್ಬರನ್ನೊಬ್ಬರು ಬಹುವಾಗಿ ಮೆಚ್ಚಿಕೊಂಡು ಪರಸ್ಪರ ಅನುರಕ್ತರಾದರು.

ಇತ್ತ ಮಹಾರಾಜ ಮಗನಿಗೆ ಶೀಘ್ರದಲ್ಲೇ ಮದುವೆ ಮಾಡುವ ಯೋಚನೆಯಲ್ಲಿದ್ದು, ಅದಕ್ಕಾಗಿ ತರಿಸಿದ್ದ ಬೇರೆ ಬೇರೆ ರಾಜ್ಯಗಳ ರಾಜ ಕನ್ಯೆಯರ ಭಾವಚಿತ್ರಗಳನ್ನು ರಾಜಕುಮಾರನಿಗೆ ತೋರಿಸಿ 'ಕುಮಾರ ಇವರಲ್ಲಿ ನಿನಗೆ ಇಷ್ಟವಾದವರನ್ನು ಆಯ್ಕೆ ಮಾಡು. ಲಗ್ನ ಕಟ್ಟಿಸೋಣ' ಎಂದು ಹೇಳಿದ ಆಗ ಅವನು 'ಕ್ಷಮಿಸಿ ಅಪ್ಪ ನಾನು ಮದುವೆಯಾಗುವುದಾದರೆ ನಮ್ಮ ತೋಟದ ಬಾಳೆಯ ಗಿಡವನ್ನು ಮಾತ್ರ. ಇವರ್‍ಯಾರೂ ಬೇಡ ಎಂದು ಬಿಟ್ಟ. ಮಹಾರಾಜ ಬೆಚ್ಚಿ ಬಿದ್ದ. 'ಇದೇನು ಹೀಗೆ ಹೇಳುತ್ತಾನೆ?' ಯಾರಾದರೂ ಗಿಡ ಮರಗಳನ್ನು ಮದುವೆಯಾಗುತ್ತಾರೆಯೇ? ಇವನಿಗೇನು ತಲೆ ಕೆಟ್ಟಿದೆಯೇ? ಎಲ್ಲ ವಿಷಯದಲ್ಲಿಯೂ ಸರಿಯಾಗೇ ಇರುವನಲ್ಲ ಮೂರು ದಿನಗಳಿಂದ ತೋಟದಲ್ಲಿ ಬೇರೆ ಮಲಗುತ್ತಿದ್ದಾನೆ. ಪ್ರಾಯದ ಹುಡುಗ, ಏನಾದರೂ ಮೋಹಿನಿ ಕಾಟ ಶುರುವಾಗಿದೆಯೋ' ಎಂದು ಹೆದರಿ ಮಂತ್ರಿಗೆ ಹೇಳಿ ಕಳುಹಿಸಿದ. ಮಂತ್ರಿ ಬಂದವನು ರಾಜಕುಮಾರನ ಸಮಾಧಾನ ಚಿತ್ತವನ್ನು ಮುಖದಲ್ಲಿ ತುಂಬಿದ್ದ ಸಂತೋಷದ ಕಳೆಯನ್ನು ಕಂಡು 'ಇವನ ಬಯಕೆಯ ಹಿಂದೆ ಏನೋ ಗುಟ್ಟು ಅಡಗಿರಬೇಕು ಸ್ವಸ್ಥವಾಗೇ ಇದ್ದಾನೆ' ಎಂದುಕೊಂಡು, 'ಪ್ರಭು ಕುಮಾರನ ಇಷ್ಟದಂತೆಯೇ ಮಾಡಿ ಮುಂದೆ ಎಲ್ಲಾ ಒಳ್ಳೆಯದೆ ಆಗುತ್ತೆ' ಎಂದು ಹೇಳಿದ.

ರಾಜಕುಮಾರನ ಮದುವೆಯ ಕರೆಯೋಲೆ ಎಲ್ಲರ ಕೈ ಸೇರಿತು. ವಧು ಯಾವ ದೇಶದ ರಾಜಕುಮಾರಿಯೂ ಅಲ್ಲ. ಅರಮನೆಯ ತೋಟದಲ್ಲಿರುವ ಒಂದು ಬಾಳೆಯ ಗಿಡವೆಂಬುದನ್ನು ಎಂದು ತಿಳಿದು ಜನರ ಆಶ್ಚರ್ಯಕ್ಕೆ ಪಾರವೇ ಇಲ್ಲ. ಈ ಕೌತುಕವನ್ನು ಕಣ್ಣಾರೆ ಕಾಣಲು ಜನಸಾಗರವೇ ತೋಟದಲ್ಲಿ ನೆರೆಯಿತು. ಬಾಳೆಯ ಗಿಡವನ್ನು ಮದುವಣಗಿತ್ತಿಯಂತೆ ಅಲಂಕರಿಸಿ ಅಲ್ಲೇ ಕಲ್ಯಾಣ ವೇದಿಕೆಯನ್ನು ನಿರ್ಮಿಸಿ, ಚಪ್ಪರ ತೋರಣ ಪುಷ್ಪಾಲಂಕಾರಗಳಿಂದ ಶೃಂಗಾರ ಮಾಡಿದ್ದರು. ಮಂಗಳವಾದ್ಯಗಳು ಮೊಳಗುತ್ತಿದ್ದವು. ನವಮನ್ಮಥನಂತಿದ್ದ ರಾಜಕುಮಾರನ ಕೈಯಲ್ಲಿ ಪುರೋಹಿತರು ಎಲ್ಲ ಶಾಸ್ತ್ರಗಳನ್ನು ಸಾಂಗವಾಗಿ ಮಾಡಿಸಿ, ಬಾಳೆಯ ಗಿಡಕ್ಕೆ ಕಟ್ಟಲು ಹೇಳಿ ಅವನ ಕೈಗೆ ಮಾಂಗಲ್ಯ ಸರವನ್ನು ಕೊಟ್ಟರು. ರಾಜಕುಮಾರ 'ಬಾಳೆಗಿಡದ ಚೆಲುವೆ ಬಾಳೆಗಿಡದ ಚೆಲುವೆ ಹಸೆಮಣೆಗೆ ಬಾ' ಎಂದು ಕರೆದ ಕೂಡಲೇ ಬಾಳೆಗಿಡ ಎರಡು ಭಾಗವಾಗಿ ಬಾಯಿಬಿಟ್ಟಿತು. ವಧುವಿನ ಶೃಂಗಾರದಲ್ಲಿ ಒಪ್ಪುತ್ತಿದ್ದ ರಾಜಕುಮಾರಿ ಬಂಗಾರದ ಬಳ್ಳಿಯಂತೆ ಬಳುಕುತ್ತ ನಾಚುತ್ತ ಬಂದು ಹಸೆಮಣೆ ಏರಿ ರಾಜಕುಮಾರನ ಬದಿಯಲ್ಲಿ ಕುಳಿತಳು.